# ಆಶಾಕಿರಣ ಯೋಜನೆ ಪ್ರಗತಿ

### ಹಂತ1 (2022–23)

**ಚಿಕ್ಕಬಳ್ಳಾಪುರ, ಚಾಮರಾಜನಗರ, ಹಾವೇರಿ ಮತ್ತು ಕಲಬುರ್ಗಿ**

- 68.21 ಲಕ್ಷ ಜನರ ಪ್ರಾಥಮಿಕ ತಪಾಸಣೆ.
- 10.82 ಲಕ್ಷ ಜನರು ಎರಡನೇ ಹಂತದ ತಪಾಸಣೆ.
- 3.25 ಲಕ್ಷ ಜನರಿಗೆ ಕನ್ನಡಕಗಳ ಸಲಹೆ.
- 2.70 ಲಕ್ಷ ಕನ್ನಡಕಗಳು ವಿತರಣೆ. (ಪ್ರಗತಿಯಲ್ಲಿದೆ).
- 59,842 ಜನರಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

### ಹಂತ 2 (2023-24)

**ಚಿತ್ರದುರ್ಗ, ಮಂಡ್ಯ, ರಾಯಚೂರು ಮತ್ತು ಉತ್ತರ ಕನ್ನಡ**

- 72.15 ಲಕ್ಷ ಜನರ ಪ್ರಾಥಮಿಕ ತಪಾಸಣೆ.
- 13.65 ಲಕ್ಷ ಜನರು ಎರಡನೇ ಹಂತದ ತಪಾಸಣೆ.
- 2.89 ಲಕ್ಷ ಕನ್ನಡಕಗಳ ಸಲಹೆ.
- 1.60 ಲಕ್ಷ ಕನ್ನಡಕ ವಿತರಣೆ (ಪ್ರಗತಿಯಲ್ಲಿದೆ).
- 45,267 ಜನರಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ.

### ಹಂತ 3: ಆಶಾಕಿರಣದ ಮರುವಿನ್ಯಾಸ

- ರಾಜ್ಯದ ದೃಷ್ಟಿದೋಷ ಸಮಸ್ಯೆಗಳಿಗೆ ಪರಿಣಾಮಕಾರಿ ಬದಲಾವಣೆಗೆಂದು ಆಶಾಕಿರಣ ಯೋಜನೆಗೆ ಹೊಸ ಸ್ವರೂಪ.
- ಶಾಶ್ವತ ಹಾಗೂ ದೀರ್ಘಕಾಲಿಕ ಕಣ್ಣಿನ ಆರೈಕೆ ಒದಗಿಸಲು ಎಲ್ಲಾ ಜಿಲ್ಲಾ ಆಸ್ಪತ್ರೆಗಳು (DH)/ ವೈದ್ಯಕೀಯ ಕಾಲೇಜು, ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು (TH) ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳು (CHC) ಒಟ್ಟು 393 ಶಾಶ್ವತ ಆಶಾಕಿರಣ ದೃಷ್ಟಿ ಕೇಂದ್ರಗಳನ್ನು ಸ್ಥಾಪನೆ.
- ನಾಗರಿಕರಿಗೆ ಸ್ಥಳೀಯ ಮಟ್ಟದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಅರ್ಹ ಫಲಾನುಭವಿಗಳಿಗೆ ಉಚಿತ ಕನ್ನಡಕ ವಿತರಣೆಯನ್ನು ನೇತ್ರಾಧಿಕಾರಿಗಳ ಮೂಲಕ ಒದಗಿಸಲಾಗುತ್ತಿದೆ.



### ಆಶಾಕಿರಣ ಯೋಜನೆಯ ಒಟ್ಟಾರೆ ಚಿತ್ರಣ

- ಆಶಾಕಿರಣ ಕಾರ್ಯಕ್ರಮದ 8 ಜಿಲ್ಲೆಗಳಲ್ಲಿ ಒಟ್ಟು 1.40ಕೋಟಿ ಜನರಿಗೆ ಆಶಾ ಕಾರ್ಯಕರ್ತರಿಂದ ಪ್ರಾಥಮಿಕ ನೇತ್ರ ತಪಾಸಣೆ.
- ಈ ಪೈಕಿ 24.50ಲಕ್ಷ ಜನರಿಗೆ ಮುಂದಿನ ಹಂತದ ನೇತ್ರ ತಪಾಸಣೆಗೆ ಸಲಹೆ.
- ದೃಷ್ಟಿದೋಷ ಕಂಡುಬಂದ 4.3 ಲಕ್ಷ ಜನರಿಗೆ ಉಚಿತ ಕನ್ನಡಕ ವಿತರಣೆ.
- ಉಳಿದ ಕನ್ನಡಕಗಳನ್ನು ಆಶಾಕಿರಣ ದೃಷ್ಟಿ ಕೇಂದ್ರಗಳಲ್ಲಿ ಇರಿಸಲಾಗಿದೆ.
- ಒಟ್ಟು 1.05 ಲಕ್ಷ ಜನರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನಡೆಸಲಾಗಿತ್ತು.

ಕನ್ನಡಕ ವಿತರಣೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಈ ಜಿಲ್ಲೆಗಳಲ್ಲಿ ಕಣ್ಣಿನ ಗಂಭೀರ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಗೆ ಒಟ್ಟು 45,267 ಜನರಿಗೆ ಕಣ್ಣಿನಪೊರೆ ಶಸ್ತ್ರ ಚಿಕಿತ್ಸೆ ನೀಡಲಾಗಿದೆ. ಎರಡೂ ಹಂತಗಳಲ್ಲಿ 8 ಜಿಲ್ಲೆಗಳಲ್ಲಿ ಒಟ್ಟು 1.40ಕೋಟಿ ಜನರನ್ನು ಪ್ರಾಥಮಿಕ ಚಿಕಿತ್ಸೆಗೊಳಪಡಿಸಿ, 24.50ಲಕ್ಷ ಮಂದಿ ಕಣ್ಣಿನ ಸಮಸ್ಯೆ ಇರುವ ವಿಚಾರ ಪತ್ತೆಯಾಗಿದೆ.

### ಯೋಜನೆಗೆ ಹೊಸ ಸ್ವರೂಪ!

ಆಶಾಕಿರಣ ಯೋಜನೆಯ ಆರಂಭದಲ್ಲಿ ಒಟ್ಟು 4 ಹಂತಗಳಲ್ಲಿ ಯೋಜನೆಯನ್ನು ಜಾರಿಗೆ ತರುವ ಉದ್ದೇಶ ಹೊಂದಲಾಗಿತ್ತು. ಮೊದಲ ಹಂತದಲ್ಲಿ ಚಿಕ್ಕಬಳ್ಳಾಪುರ, ಕಲಬುರಗಿ, ಹಾವೇರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ, ಎರಡನೇ ಹಂತದಲ್ಲಿ ಚಿತ್ರದುರ್ಗ, ಮಂಡ್ಯ, ರಾಯಚೂರು ಮತ್ತು ಉತ್ತರ ಕನ್ನಡ, ಮೂರನೇ ಹಂತವಾಗಿ 2024–25ರ ಅನುಷ್ಠಾನದ ಭಾಗವಾಗಿ ರಾಮನಗರ, ಯಾದಗಿರಿ, ಕೊಡಗು ಮತ್ತು ಗದಗ ಸೇರಿದಂತೆ ಹೆಚ್ಚುವರಿ ಜಿಲ್ಲೆಗಳನ್ನು ಒಳಗೊಂಡಿದ್ದು. 4ನೇ ಹಂತವಾಗಿ 2025–26ರಲ್ಲಿ ಚಿಕ್ಕಮಗಳೂರು, ಬೀದರ್, ಕೋಲಾರ ಮತ್ತು ಬಾಗಲಕೋಟೆಗೆ ಯೋಜನೆ ವಿಸ್ತರಿಸಲು ಸರ್ಕಾರ ತೀರ್ಮಾನಿಸಿತ್ತು. ಆದರೆ, 2ಹಂತಗಳಲ್ಲಿ ಒಟ್ಟು 8 ಜಿಲ್ಲೆಗಳಲ್ಲಿ ಅನುಷ್ಠಾನದ ಬಳಿಕ ಆಶಾಕಿರಣ ಯೋಜನೆಗೆ ಹೊಸ ಸ್ವರೂಪ ನೀಡಲಾಗಿದೆ. 3ನೇ ಹಂತದ ಭಾಗವಾಗಿ ರಾಜ್ಯದ ಜನರಿಗೆ ಸ್ಥಳೀಯ ಮಟ್ಟದಲ್ಲೇ ಪರಿಣಾಮಕಾರಿ ಚಿಕಿತ್ಸೆ ಒದಗಿಸುವ ಸದುದ್ದೇಶದಿಂದ 'ಆಶಾಕಿರಣ ದೃಷ್ಟಿ ಕೇಂದ್ರ' ಸ್ಥಾಪನೆಗೆ ಉದ್ದೇಶಿಸಲಾಯಿತು. ಈ ಪ್ರಕಾರ ರಾಜ್ಯಾದ್ಯಂತ ಒಟ್ಟು 393 ದೃಷ್ಟಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬೆಂಗಳೂರಿನಲ್ಲಿ ಸಿಎಸ್ಆರ್ ಸಹಯೋಗದಲ್ಲಿ 5 ಸೇರಿ ಒಟ್ಟು 11 ದೃಷ್ಟಿ ಕೇಂದ್ರಗಳು ಹಾಗೂ ಜಿಲ್ಲಾ ಆಸ್ಪತ್ರೆ ಕೋಲಾರದಲ್ಲಿ 1 ದೃಷ್ಟಿ ಕೇಂದ್ರ ಸ್ಥಾಪಿಸಲಾಗಿದೆ.

